| | Rs. |
|---|---|
| (3) Kannegala Tank. | 29,000 |
| (4) Ramasamudram Doddakere and Chikkere. | 1,08,000 |

(*c*) Estimate in respect of Chamasagara Tank is under submission to Government by the Chief Engineer.

The estimate relating to Ummathur Tank is under scrutiny in the Superintending Engineer's Office.

The estimates in respect of Kannegala and Ramasamudram Doddakere and Chikkere Tanks are under submission to the Superintending Engineer, Cauvery Circle, by the Executive Engineer, Mysore Division.

ಶ್ರೀ ಯು. ಎಂ. ಮಾದಪ್ಪ.—ರಾಮನಮುದ್ರು ದೊಡ್ಡಕೆರೆ ಚಿಕ್ಕಕೆರೆಗಳಿಗೆ ಸೇರಿದ ಅಚ್ಚುಕಟ್ಟು ಪ್ರದೇಶವೆಷ್ಟು ?

**Sri Kadidal MANJAPPA.**—I have no information regarding the atchkat.

ಶ್ರೀ ಯು. ಎಂ. ಮಾದಪ್ಪ.—ಅದರ ಕೆಳಗೆ ಜಾಸ್ತಿ ಅಚ್ಚುಕಟ್ಟಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಯು. ಎಂ. ಮಾದಪ್ಪ.—ತಾವು ನಮೂದಿಸಿರುವ ಅಂದಾಜುಗಳನ್ನು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜುಗಳನ್ನು ನೋಡಿ ತೀರ್ಮಾನ ಮಾಡಬೇಕಾಗಿದೆ, ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ತಾವು ಈಗ್ಯೆ ಎರಡು ವರ್ಷಗಳ ಹಿಂದೆ ಚಾಮರಾಜನಗರಕ್ಕೆ ಬಂದಿದ್ದಾಗ ಈ ಕೆರೆಯ ಅಂದಾಜನ್ನು ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡಲಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಯು. ಎಂ. ಮಾದಪ್ಪ.—ಎರಡು ವರ್ಷವಾದರೂ ಪೂರ್ತಿಯಾಗದೇ ಇರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅಸಿಸ್ಟೆಂಟ್ ಇಂಜಿನಿಯರು ಅಂದಾಜು ತಯಾರುಮಾಡುವುದು, ಅದನ್ನು ಎಗ್ಸಿಕ್ಯೂಟಿವ್ ಇಂಜಿನಿಯರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರು scrutiny ಮಾಡಬೇಕಾಗುತ್ತದೆ. ಅದರಲ್ಲಿ ತಪ್ಪೇನಾದರೂ ಇದ್ದರೆ ಪುನಃ ಅದನ್ನು ಅಸಿಸ್ಟೆಂಟ್ ಇಂಜಿನಿಯರಿಗೆ ಕಳುಹಿಸಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಕೆಲವು ಸಂದರ್ಭಗಳಲ್ಲಿ ಅಂದಾಜು ಪೂರ್ತಿಮಾಡುವುದು ಸ್ವಲ್ಪ ತಡವಾಗುತ್ತದೆ.

---

### Tanks restored and unrestored in Chiknaikanahalli Taluk.

*Q.*—571. **Sri C. H. LINGADEVARU** (Chiknaikanahalli).—

Will the Government be pleased to state :—

(*a*) the names of tanks in Chiknaikanahalli Taluk requiring restoration ;

(*b*) the names of tanks restored during the last five years in this taluk?

*A.*—**Sri Kadidal MANJAPPA** (Minister for Revenue and Public Works).—

(*a*) Please see Statement appended below.

(*b*) (i) Gopalapura Tank.
(ii) Kenkere Narasannakere.
(iii) Soralamavu Doddakere.

V-31'NSS-
NS6-12-1
(B)4717

(SRI KADIDAL MANJAPPA.)

STATEMENT.

Details of tanks requiring restoration in Chiknaikanahalli Taluk in Tumkur District.

| *Sl. No.* | *Tanks Major.* | *Sl. No.* | *Tanks Minor* |
|---|---|---|---|
| 1 | Banikere Doddakere | 1 | Byadarahally tank |
| 2 | Pankajanahally tank | 2 | Kadurkere Arasankere |
| 3 | Dabbeghatta Doddakere | 3 | Sadarahally Arlikatte |
| 4 | Anekatte, Urumundinakere | 4 | Ganasagara tank |
| | | 5 | Thimmalapura Sivarama Bhattanakere. |
| | | 6 | Nandihally tank |
| | | 7 | Balegule Melekere |
| | | 8 | Gandanahally tank |
| | | 9 | Hesarahally tank |
| | | 10 | Balenahally Kumbarakatte |
| | | 11 | Koda'agara Doddajjikere |
| | | 12 | Manchasandra tank |
| | | 13 | Madapura tank |
| | | 14 | Upparahally tank |
| | | 15 | Mathighatta tank |
| | | 16 | Nirugal Urumundinakere |
| | | 17 | Handanakere Sivasandra tank |
| | | 18 | Handanakere Nagathi tank |
| | | 19 | Ramaghatta Nayakanakatte |
| | | 20 | Handanakere Ramaghattakere |
| | | 21 | Handanakere Halekere |
| | | 22 | Hadapakatte Lingappanakatte |
| | | 23 | Thimmalapura Harinkere |
| | | 24 | Gowdagere Venkataiahkere |
| | | 25 | Halemadu Haranahally Kere |
| | | 26 | Motihally Urumundinakere |

ಶ್ರೀ ಸಿ. ಎಚ್. ಲಿಂಗದೇವರು.—ಐದು ವರ್ಷಗಳಿಂದ ಮೂರು ಕೆರೆಗಳನ್ನು ಮಾತ್ರ ದುರಸ್ತು ಮಾಡುತ್ತಿದ್ದೀರಿ. ಬಾಕಿ ಉಳಿದ ಕೆರೆಗಳನ್ನು ಎಷ್ಟು ವರ್ಷದಲ್ಲಿ ದುರಸ್ತುಮಾಡಿ ಮುಗಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದು restorationಗೆ ಮಾತ್ರ ಸಂಬಂಧಪಟ್ಟಿದೆ. 15 ಕೆರೆಗಳನ್ನು de-silt ಮಾಡಲಾಗಿದೆ. ಆಮೇಲೆ 5 ಕೆರೆಗಳಿಗೆ, channel, waste-weir ಮತ್ತು sluice ಇವುಗಳಿಗೆ ಸಂಬಂಧಪಟ್ಟಹಾಗೆ ರಿಪೇರಿಗಳನ್ನು ಮಾಡಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಆ ಐದು ಕೆರೆಗಳು ಯಾವುವು ?

ಶ್ರೀ ಕಡಿದಾಳ್ ಮಂಜಪ್ಪ.—ಹೀರೇಹಳ್ಳಿ ಕೆರೆ, ಜಯಚಾಮರಾಜಪುರ ಟ್ಯಾಂಕ್, ಬನಘಟ್ಟ ಟ್ಯಾಂಕ್, ಮುಂತಾದ 15 ಕೆರೆಗಳನ್ನು de-silt ಮಾಡಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಬಾಕಿ ಉಳಿದ 15 ಕೆರೆಗಳ ರಿಪೇರಿ ಯಾವಾಗ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನಂಸ್ಥಾನಕ್ಕೆಲ್ಲಾ ಅನ್ವಯಿಸುವಂಥ ಒಂದು ಯೋಜನೆಯನ್ನು ಹಾಕಿದ್ದೇವೆ. ಆ ಯೋಜನೆಯ ಪ್ರಕಾರ ಕೆರೆಗಳ ಜೀರ್ಣೋದ್ಧಾರ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ರಾಚಯ್ಯ.—ಪ್ರಾಜೆಕ್ಟು ಮಾಡಿ ತಯಾರಿಪಿದ ಪ್ರತಿಯೊಂದು ಕೆರೆಯ ಸಾಲಾ ಬಾದು ಕೆಲಸ ಕಾರ್ಯಗಳನ್ನು ಬಹಳ ವರ್ಷಗಳಿಂದ ನಡೆಸದೆ ಇದ್ದುದರಿಂದ, ಆ ಕೆಲಸವನ್ನು ಈ ವರ್ಷವಾದರೂ ತೆಗೆದು ಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ವರ್ಷಗಳಿಂದ ನಾದುರಸ್ತು ಆಗಿರುವ ಕೆರೆಗಳ ಸಂಖ್ಯೆ ಜಾಸ್ತಿಯಾಗಿದೆ. ಆದುದರಿಂದಲೇ ಈಗ ರೈತರು ಪದೇ ಪದೇ ಕೆರೆಗಳನ್ನು ದುರಸ್ತು ಮಾಡಬೇಕೆಂದು ಕೇಳುತ್ತಾ ಇರುವುದು.

ಶ್ರೀ ಬಿ ರಾಚಯ್ಯ.—ಈ ತಾಲ್ಲೂಕಿನಲ್ಲಿ ಈ ಕೆರೆಗಳನ್ನು ಬಿಟ್ಟು ಬೇರೆ ಯಾವ ಕೆರೆಗಳೂ ರಿಪೇರಿ ಆಗಿಲ್ಲ ಎಂಬುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದ ಕ್ಕಾಗುವುದಿಲ್ಲ. ಬೇರೆ ಕೆರೆಗಳ ರಿಪೇರಿಯಾಗಿರಬೇಕು.

ಶ್ರೀ ಬಿ. ರಾಚಯ್ಯ.—ಇವು ಲಾಭದಾಯಕ ವಾಗಿರುವುದರಿಂದ, ಇವನ್ನು ಬೇಗ ಕಾರ್ಯಗತ ಮಾಡುತ್ತೀರಾ ?

Mr. SPEAKER.—It is a request.

ಶ್ರೀ ಸಿ. ಎಚ್. ಲಿಂಗದೇವರು.—ಆ ಯೋಜನೆಯ ಪ್ರಕಾರ ಆ ತಾಲ್ಲೂಕಿನಲ್ಲಿ ಎಷ್ಟು ವರ್ಷಗಳಲ್ಲಿ ಎಲ್ಲಾ ಕೆರೆಗಳ ದುರಸ್ತು ಆಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಂತಿಷ್ಟೇ ವರ್ಷಗಳಲ್ಲಿ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಹಣದ ಮೇಲೆ ಅವಲಂಬಿಸುತ್ತದೆ. ಹಣವಿದ್ದರೆ ಮಾಡಬಹುದು, ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ಸೂಚಿಸಿರುವ ಮೂರು ಕೆರೆಗಳು 1953ನೇ ಸಾಲಿನಲ್ಲಿ ಒಡೆದು ಹೋಗಿದ್ದ ಕೆರೆಗಳಲ್ಲವೆ ?

Sri Kadidal MANJAPPA.—I want notice.

---

## Bridge across Papagni near Yenagadale.

*Q.*—581. Sri M. C. ANJANEYA REDDY (Chintamani).—

Will the Government be pleased to state :—

(*a*) whether they are aware that travellers and vehicular traffic are put to much trouble near Yenagadale Village due to heavy floods of the Papagni river running across Chelur-Chintamani Road ;

(*b*) whether any estimate had been prepared previously for the construction of a bridge across this river;

(*c*) whether they intend to construct a bridge in the near future ?

*A.*—Sri Kadidal MANJAPPA (Minister for Revenue and Public Works).—

(*a*) Yes.

(*b*) Yes.

(*c*) Will be examined.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಸೇತುವೆಗೆ ಅಂದಾಜು ಯಾವಾಗ ತಯಾರಾಗಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—1947-48ನೇ ಇಸವಿಯಲ್ಲಿ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಷ್ಟು ವರ್ಷಗಳೂ ಈ ಕೆಲಸವಾಗದೆ ಹಾಗೆಯೆ ಉಳಿದು ಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕೋಲಾರ ಜಿಲ್ಲಾ ಬೋರ್ಡಿನವರು ಸೇತುವೆಯ ಕೆಲಸಕ್ಕೆ ತಮ್ಮ ಭಾಗದ ಹಣವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದಕ್ಕೋಸ್ಕರ 1951ನೇ ಇಸವಿಯಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಸರ್ಕಾರದವರು ತೀರ್ಮಾನಮಾಡಿದರು. ಈಗ ಅದನ್ನು ಪುನಃ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನವರು ದುಡ್ಡು ಕೊಟ್ಟರೆ ತಾನೇ ತಾವು ಪುನಃ ಪರಿಶೀಲನೆ ಮಾಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನವರು ದುಡ್ಡು ಕೊಡದೆ ಇದ್ದುದರಿಂದ ಕೆಲಸ ನಿಂತು ಹೋಯಿತು ಎಂದು ಹೇಳಿದಿರಿ. ಆದ್ದರಿಂದ ಅವರು ದುಡ್ಡು ಕೊಟ್ಟರೆ ತಾನೇ ತಾವು ಪರಿಶೀಲನೆ ಮಾಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವರೀತಿ ಹಣ ಕೊಡಬೇಕೆಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹಾಗಾದರೆ, ಅದನ್ನು ತಾವೇ ಮಾಡುತ್ತೀರಿ ಎಂದು ಅರ್ಥವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ನಿರ್ದಿಷ್ಟವಾಗಿ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಪರಿಶೀಲನು ತ್ತೇವೆಂದು ಜವಾಬುಕೊಟ್ಟಿರಿ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಬಂದ ಮೇಲೆ ಪರಿಶೀಲನೆ ಮಾಡುತ್ತೇವೆ.

Sri H. C. LINGA REDDY.—What is the value of this estimate ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿನ ಕಾಲದಲ್ಲಿ 92,000 ರೂಪಾಯಿಗಳು ಆಗಿತ್ತು. ಈಗ ಅದು ಇನ್ನೂ ಜಾಸ್ತಿಯಾಗುತ್ತದೆ.

Sri H. C. LINGA REDDY.—Has a revised estimate been made in 1950-51 ?

ಶ್ರೀ ಕಡಿದಾಳ್ ಮಂಜಪ್ಪ.—1950-51 ರಲ್ಲಿ ಆಗಿದೆ.

Sri H. C. LINGA REDDY.—What is the value of the estimate according to the revised estimate ?

Sri Kadidal MANJAPPA.—ಅದು Rs. 92,000.

Sri H. C. LINGA REDDY.—Are the Government aware that during rainy season, bus traffic and other traffic will be stopped there and for weeks together there can be no traffic from this side of the river to the other side ?

Sri Kadidal MANJAPPA.—There is answer to question (*a*).

Sri H. C. LINGA REDDY.—Will the Government take it up early and finish it ?

Sri Kadidal MANJAPPA.—I want to see the estimate before committing myself.

---

## High School at Chunchanakatte.

*Q.*—52. Sri S. H. THAMMIAH *alias* HANUMANTHEGOWDARA THAMMIAH (Krishnarajanagar).—

Will the Government be pleased to state :—

(*a*) the amount received by way of donation for the High School established at Chunchankatte, Krishnarajanagar Taluk ;